# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

'ನಿರ್ಮಾಣ ಭವನ', ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010
www.souharda.coop, Ph: 080-23378375-80,E-mail: souharda@souharda.coop


## ನೇರ ನೇಮಕಾತಿ ಲಿಖಿತ ಪರೀಕ್ಷೆಯ ಬಗ್ಗೆ ಸೂಚನೆಗಳು

1. ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು, ಹಾಜರಾಗಬೇಕಾದ ಪರೀಕ್ಷಾ ಕೇಂದ್ರದ ವಿವರದೊಂದಿಗೆ ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಪ್ರಕಟಿಸಲಾಗಿದ್ದು ಗಮನಿಸಲು ಕೋರಿದೆ.

2. ಲಿಖಿತ ಪರೀಕ್ಷೆಯು ದಿನಾಂಕ:22.04.2018, ಭಾನುವಾರವಾಗಿದ್ದು ಬೆಂಗಳೂರು, ಮೈಸೂರು. ಬೆಳಗಾವಿ ಮತ್ತು ಕಲಬುರಗಿಯ ಈ ಕೆಳಕಂಡ ವಿಳಾಸದಲ್ಲಿನ ಪರೀಕ್ಷಾ ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆ ನಡೆಯಲಿದೆ.

| ಕ್ರ.ಸಂ | ವಿಭಾಗ | ಪರಿಕ್ಷಾ ಕೇಂದ್ರ ವಿಳಾಸ |
|---|---|---|
| 1 | ಬೆಂಗಳೂರು | ವಿವೇಕಾನಂದ ಪದವಿ ಕಾಲೇಜ್, ಡಾ. ರಾಜಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560055, |
| 2 | ಮೈಸೂರು | ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು, # 140, ಶ್ರೀ ಹೊಸಮಠ, ಖಿಲ್ಲೆ ಮೊಹಲ್ಲಾ, ಶಂಕರ ಮಠ ರಸ್ತೆ, ಜೆಎಸ್‌ಎಸ್ ಆಸ್ಪತ್ರೆಯ ಹತ್ತಿರ, ಮೈಸೂರು–570004. |
| 3 | ಬೆಳಗಾವಿ | ಎಂ.ಜಿ.ವಿ, ಮಂಡಲ್ಸ್ ಪಿ.ಯುಸಿ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಸನ್ಮಾನ್ ಹೋಟೆಲ್ ಹಿಂಭಾಗ, ಗಾಂಧಿಭವನ ಪಕ್ಕ ಕಾಲೇಜ್ ರಸ್ತೆ, ಬೆಳಗಾವಿ –590001 |
| 4 | ಕಲಬುರಗಿ | ನೂತನ ವಿದ್ಯಾಲಯ ಬಾಲಕರ ಪ್ರೌಢಶಾಲೆ, 2ನೇ ಮಹಡಿ, ಶರಣ ಬಸವೇಶ್ವರ ದೇವಸ್ಥಾನ ರಸ್ತೆ, ಕಲಬುರಗಿ–585102. |

3. ಯಾವ ಅಭ್ಯರ್ಥಿ ಯಾವ ಪರೀಕ್ಷಾ ಕೇಂದ್ರದಲ್ಲಿ ಲಿಖಿತ ಪರೀಕ್ಷೆಯಲ್ಲಿ ಭಾಗವಹಿಸಬೇಕು ಎನ್ನುವ ವಿವರವನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಪ್ರಕಟಿಸಲಾಗಿದ್ದು ಗಮನಿಸಲು ಕೋರಿದೆ. ಪರೀಕ್ಷಾ ಕೇಂದ್ರ ಬದಲಾವಣೆಗೆ ಅವಕಾಶವಿರುವುದಿಲ್ಲ.

4. ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷಾ ಪ್ರವೇಶ ಪತ್ರವನ್ನು ಅರ್ಜಿಯಲ್ಲಿ ನಮೂದಿಸಿರುವ ಮೇಲ್ ಐಡಿಗೆ ಇ ಮೇಲ್ ಮೂಲಕ ಕಳುಹಿಸಲಾಗಿದ್ದು, ಸದರಿ ಪ್ರವೇಶ ಪತ್ರವನ್ನು ಮುದ್ರಿಸಿ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸಿ, ಸಹಿ ಮಾಡಿ ಲಿಖಿತ ಪರೀಕ್ಷೆಯ ಸಮಯದಲ್ಲಿ ಹಾಜರುಪಡಿಸಬೇಕು.

5. ಉಪಪ್ರಧಾನ ವ್ಯವಸ್ಥಾಪಕ, ಸಹಪ್ರಧಾನ ವ್ಯವಸ್ಥಾಪಕ, ಅಧಿಕಾರಿ, ತಾಂತ್ರಿಕ ಅಧಿಕಾರಿ ಹುದ್ದೆಗಳಿಗೆ ಏಕರೂಪದ ಪ್ರಶ್ನೆ ಪತ್ರಿಕೆ ಇರಲಿದ್ದು, ಈ ಹುದ್ದೆಗಳಿಗೆ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಲಿಖಿತ ಪರೀಕ್ಷೆ ನಡೆಯಲಿದೆ.

6. ಉಪಸಿಬ್ಬಂದಿ, ಉಪಸಿಬ್ಬಂದಿ ಕಮ್ ವಾಹನ ಚಾಲಕ, ಸ್ವಚ್ಛತಾ ಸಿಬ್ಬಂದಿ (ಸ್ವೀಪರ್) ಹುದ್ದೆಗಳಿಗೆ ಏಕರೂಪದ ಪ್ರಶ್ನೆ ಪತ್ರಿಕೆ ಇರಲಿದ್ದು, ಈ ಹುದ್ದೆಗಳಿಗೆ ಬೆಳಿಗ್ಗೆ 11.00 ರಿಂದ 12:00 (60ನಿಮಿಷಗಳು) ಗಂಟೆಯವರೆಗೆ ಲಿಖಿತ ಪರೀಕ್ಷೆ ನಡೆಯಲಿದೆ.

7. ಸೌಹಾರ್ದ ಅಭಿವೃದ್ಧಿ ಅಧಿಕಾರಿ, ವಿನ್ಯಾಸಗಾರರು, ಸಹಾಯಕರು, ಶೀಘ್ರಲಿಪಿಗಾರರು ಈ ಹುದ್ದೆಗಳಿಗೆ ಏಕರೂಪದ ಪ್ರಶ್ನೆ ಪತ್ರಿಕೆ ಇರಲಿದ್ದು, ಈ ಹುದ್ದೆಗಳಿಗೆ ಮಧ್ಯಾಹ್ನ 02.30 ರಿಂದ 04.30 ಗಂಟೆಯವರೆಗೆ ಲಿಖಿತ ಪರೀಕ್ಷೆ ನಡೆಯಲಿದೆ.

8. ಲಿಖಿತ ಪರೀಕ್ಷೆಗೆ ಕರೆಯಲ್ಪಟ್ಟ ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ ಹಾಜರಾಗಬೇಕು. ಸಂಯುಕ್ತ ಸಹಕಾರಿಯಿಂದ ಯಾವುದೇ ಭತ್ಯೆಯನ್ನು ನೀಡಲಾಗುವುದಿಲ್ಲ.

9. ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಅರ್ಜಿ ತಿರಸ್ಕೃತ ಅಭ್ಯರ್ಥಿಗಳ ಪಟ್ಟಿಯನ್ನು, ತಿರಸ್ಕರಿಸಲು ಕಾರಣಗಳ ಸಮೇತ ಪ್ರಕಟಿಸಲಾಗಿದೆ. ಅರ್ಜಿ ತಿರಸ್ಕೃತ ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಭಾಗವಹಿಸಲು ಅವಕಾಶವಿಲ್ಲ

10. ಲಿಖಿತ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ಉತ್ತರಗಳನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಪರೀಕ್ಷೆ ಮುಗಿದ 48 ಗಂಟೆಯೊಳಗಾಗಿ ಪ್ರಕಟಿಸಲಾಗುವುದು.

11. **ಲಿಖಿತ ಪರೀಕ್ಷೆ ಪಠ್ಯಕ್ರಮ:** ಲಿಖಿತ ಪರೀಕ್ಷೆಯು ಎರಡು ಪತ್ರಿಕೆಗಳನ್ನು ಹೊಂದಿರುತ್ತದೆ. ಇವು ಬಹು ಆಯ್ಕೆ ಮಾದರಿ ಪ್ರಶ್ನೆ ಪತ್ರಿಕೆಗಳಾಗಿದ್ದು 200 ಪ್ರಶ್ನೆಗಳನ್ನು ಒಳಗೊಂಡಿದ್ದು ಪ್ರತಿ ಪಶ್ನಗೆ ಒಂದು ಅಂಕದಂತೆ 200 ಅಂಕಗಳನ್ನು ಒಳಗೊಂಡಿರುತ್ತದೆ. (ಪ್ರಶ್ನೆ ಪತ್ರಿಕೆ ಕನ್ನಡ ಮತ್ತು ಆಂಗ್ಲ ಬಾಷೆಯಲ್ಲಿರುತ್ತದೆ) ಉಪಸಿಬ್ಬಂದಿ, ಉಪಸಿಬ್ಬಂದಿ ಕಮ್ ವಾಹನ ಚಾಲಕ, ಸ್ವಚ್ಛತಾ ಸಿಬ್ಬಂದಿ ಹುದ್ದೆಗೆ 40 ಪ್ರಶ್ನೆಗಳನ್ನು ಒಳಗೊಂಡಿದ್ದು ಪ್ರತಿ ಪ್ರಶ್ನೆಗೆ 5 ಅಂಕಗಳಂತೆ 200 ಅಂಕಗಳನ್ನು ಒಳಗೊಂಡಿರುತ್ತದೆ.

**ಭಾಗ–1**

| | |
|---|---|
| ಅ. 97ನೇ ಭಾರತ ಸಂವಿಧಾನ ತಿದ್ದುಪಡಿ | 25 ಅಂಕಗಳು |
| ಆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 | 25 ಅಂಕಗಳು |
| ಇ. ಸಹಕಾರ ಚಳುವಳಿ | 35 ಅಂಕಗಳು |
| ಈ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 | 40 ಅಂಕಗಳು |

**ಭಾಗ–2**

| | |
|---|---|
| ಅ. ಕನ್ನಡ ಭಾಷಾ ಜ್ಞಾನಕ್ಕೆ | 25 ಅಂಕಗಳು |
| ಆ. ಸಾಮಾನ್ಯ ಜ್ಞಾನ ಮತ್ತು ಇಂಗ್ಲೀಷ್ ಜ್ಞಾನಕ್ಕೆ | 25 ಅಂಕಗಳು |
| ಇ. ಬ್ಯಾಂಕಿಂಗ್ ಹಾಗೂ ಅಕೌಂಟಿಂಗ್ | 25 ಅಂಕಗಳು |

**ಗಮನಿಸಿ:** ಲಿಖಿತ ಪರೀಕ್ಷೆ/ಸಂದರ್ಶನ/ಕೌಶಲ್ಯ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗೆ ಪ್ರಯಾಣ ಖರ್ಚುಗಳು, ಭತ್ಯೆಗಳನ್ನು ನೀಡಲಾಗುವುದಿಲ್ಲ.

**12. ಅಭ್ಯರ್ಥಿಗಳಿಗೆ ಸೂಚನೆಗಳು :**

1) ಅರ್ಹ ಅಭ್ಯರ್ಥಿಗಳು ತಮ್ಮ ಫೋಟೋ ಐಡಿ (ಚುನಾವಣಾ ಗುರುತಿನ ಪತ್ರ ಅಥವಾ ಡ್ರೈವಿಂಗ್ ಲೈಸೆನ್ಸ್ ಅಥವಾ ಪ್ಯಾನ್ ಕಾರ್ಡ್ ಅಥವಾ ಆಧಾರ್ ಕಾರ್ಡ್ ಇವುಗಳಲ್ಲಿ ಯಾವುದಾದರೂ ಒಂದು) ಒರಿಜಿನಲ್ ಮತ್ತು ಒಂದು ಜೆರಾಕ್ಸ್ ಪ್ರತಿಯನ್ನು, ಸಂಯುಕ್ತ ಸಹಕಾರಿಯು ನೀಡುವ ಪರೀಕ್ಷಾ ಪ್ರವೇಶ ಪತ್ರದೊಂದಿಗೆ ಹಾಜರುಪಡಿಸುವುದು.

2) ಪರೀಕ್ಷಾ ಪ್ರವೇಶ ಪತ್ರ ಹಾಗೂ ಫೋಟೋ ಐಡಿಯ ಜೆರಾಕ್ಸ್ ಪ್ರತಿಯನ್ನು ಪರೀಕ್ಷಾ ಕೇಂದ್ರದ ಮೇಲ್ವಿಚಾರಕರಿಗೆ ನೀಡತಕ್ಕದ್ದು.

3) ವೆಬ್‌ಸೈಟ್‌ನಲ್ಲಿ ಪ್ರಕಟಿಸಿದಂತೆ, ನಿಗದಿಪಡಿಸಿದ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷಾ ಸಮಯಕ್ಕಿಂತ 30 ನಿಮಿಷಗಳ ಮುಂಚಿತವಾಗಿ ಅಭ್ಯರ್ಥಿಗಳು ಹಾಜರಿರಬೇಕು.

4) ಪರೀಕ್ಷಾ ಆರಂಭದ ಸಮಯದ ನಂತರ ಆಗಮಿಸುವ ಅಭ್ಯರ್ಥಿಗೆ ಲಿಖಿತ ಪರೀಕ್ಷೆಗೆ ಪ್ರವೇಶ ನಿರಾಕರಿಸಲಾಗುವುದು. ಲಿಖಿತ ಪರೀಕ್ಷೆಗೆ ಹಾಜರಾಗಿರುವ ಅಭ್ಯರ್ಥಿಯು, ಪರೀಕ್ಷೆ ಆರಂಭವಾಗಿ 60 ನಿಮಿಷಗಳವರೆಗೆ ಪರೀಕ್ಷಾ ಕೊಠಡಿಯಿಂದ ಹೊರಹೋಗುವಂತಿಲ್ಲ.

5) ಪರೀಕ್ಷಾ ಅವಧಿಯು ಒಟ್ಟೂ 120 ನಿಮಿಷಗಳಾಗಿರುತ್ತದೆ. ಪ್ರಶ್ನೆ ಪತ್ರಿಕೆಯು ಒಂದು ಅಂಕದ ಒಟ್ಟೂ 200 ಬಹು ಆಯ್ಕೆಯ ಪ್ರಶ್ನೆಗಳನ್ನು ಹೊಂದಿರುತ್ತದೆ. ಉಪಸಿಬ್ಬಂದಿ ಕಮ್ ವಾಹನ ಚಾಲಕ, ಸ್ವಚ್ಛತಾ ಸಿಬ್ಬಂದಿ ಹುದ್ದೆಗೆ ಪರೀಕ್ಷಾ ಅವಧಿಯು ಒಟ್ಟೂ 60 ನಿಮಿಷಗಳಾಗಿರುತ್ತದೆ. ಪ್ರಶ್ನೆ ಪತ್ರಿಕೆಯು 5 ಅಂಕದ ಒಟ್ಟೂ 40 ಬಹು ಆಯ್ಕೆಯ ಪ್ರಶ್ನೆಗಳನ್ನು ಹೊಂದಿರುತ್ತದೆ.

6) ಪರೀಕ್ಷಾ ಕೊಠಡಿಗೆ ಪುಸ್ತಕಗಳನ್ನು, ನೋಟ್ ಬುಕ್, ಮೊಬೈಲ್, ಲ್ಯಾಪ್‌ಟಾಪ್, ಕ್ಯಾಲ್ಕುಲೇಟರ್ ಇತ್ಯಾದಿಗಳನ್ನು ತರುವಂತಿಲ್ಲ ಹಾಗೂ ಇವುಗಳ ಬಳಕೆಯನ್ನು ಪರೀಕ್ಷೆಯಲ್ಲಿ ಅನುಮತಿಸಲಾಗುವುದಿಲ್ಲ.

7) **ವಿಶೇಷ ಸೂಚನೆ : ಉತ್ತರ ಪತ್ರಿಕೆಯು ಓಎಂಆರ್ ಷೀಟ್ ಬಳಕೆಯ ಮೂಲಕ ನಡೆಯುವುದರಿಂದ ನೀಲಿ ಅಥವಾ ಕಪ್ಪು ಬಾಲ್ ಪಾಯಿಂಟ್ ಪೆನ್‌ನಲ್ಲಿ ಉತ್ತರವನ್ನು ಗುರುತಿಸುವಂತೆ ಪೆನ್‌ಗಳನ್ನು ಹೊಂದಿರಬೇಕು.**

8) ಯಾವುದೇ ಅಭ್ಯರ್ಥಿಯು ಇತರ ಅಭ್ಯರ್ಥಿಗೆ ಪರೀಕ್ಷಾ ಸಮಯದಲ್ಲಿ ಸಹಾಯ ಮಾಡುವುದು, ತೊಂದರೆ ಉಂಟು ಮಾಡುವುದು, ನಕಲು ಮಾಡಲು ಪ್ರಯತ್ನಿಸುವುದು, ನಕಲು ಮಾಡಲು ಅವಕಾಶ ಒದಗಿಸುವುದು ಸೇರಿದಂತೆ ಯಾವುದೇ ದುರ್ವರ್ತನೆಯಲ್ಲಿ ತೊಡಗಿದಲ್ಲಿ ಅಂತಹ ಅಭ್ಯರ್ಥಿಯನ್ನು ಪರೀಕ್ಷಾ ಕೊಠಡಿಯಿಂದ ಹೊರಕಳಿಸಲಾಗುವುದು ಹಾಗೂ ಪರೀಕ್ಷಾ ಪ್ರಕ್ರಿಯೆಯಲ್ಲಿ ಪರಿಗಣಿಸಲಾಗುವುದಿಲ್ಲ.

ಸಹಿ/–

ವ್ಯವಸ್ಥಾಪಕ ನಿರ್ದೇಶಕ

ಮತ್ತು ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ ನೇಮಕಾತಿ ಸಮಿತಿ

ದಿನಾಂಕ : 10.04.2018

ಸ್ಥಳ : ಬೆಂಗಳೂರು.